# ಅಧ್ಯಾಯ 14

**ಶ್ರೀ ಗಣೇಶಾಯ ನಮಃ     ಸದ್ಗುರು ಸಿದ್ಧಾರೂಢ ನಮಃ**



**ಛಂದ: ಕಮಲನೇತ್ರನೇ ಪುಣ್ಯಗಾತ್ರನೆ ಅಖಿಲ ಭುವನದ
ಸೂತ್ರನೇ| ಅಮಲ ಹೃದಯನೇ ಭಕ್ತಸದಯನೆ ದೀನಜನ
ಸನ್ಮಿತ್ರನೇ| ವೇದಸ್ತವನ ಸುಪಾತ್ರನೇ ನೀ ಸರ್ವವ್ಯಾಪಿ ಪವಿತ್ರನೇ
ಕ್ರೋಧ ವ್ಯಾಘ್ರನ ಶಾಂತ ಪಡಿಸುತ ರಕ್ಷಿಸೋ ಸುಚರಿತ್ರನೇ :-**

ಹೇ ಸಿದ್ಧಾರೂಢ ಸದ್ಗುರುವೇ, ಎಲ್ಲಾ ಮುಮುಕ್ಷು ಜನರ ಪುಣ್ಯವು, ಮುಶಿಯೊಳಗೆ ಹಾಕಿ ನಿನ್ನ ಈ ಪುಣ್ಯ ಶರೀರವು ಎರೆಯಲ್ಪಟ್ಟಿತು. ನಿನಗೆ ಜನ್ಮ ಒಂದು ವೇಳೆ ಹೇಳುವುದಾದರೆ, ಅದನ್ನು ಲೀಲೆಗೋಸ್ಕರವಾಗಿ ನೀನಿಟ್ಟಿರುವಿ. ಕ್ಷಣ ಮಾತ್ರ ನಿನ್ನ ಸಂಗತಿಯಾದರೆ ತೀವ್ರವಾಗಿ ಭವಬಂಧವು ನಾಶವಾಗಿ ಅಂತರದಲ್ಲಿ ಬ್ರಹ್ಮವು ಪ್ರಕಟವಾಗುತ್ತದೆ. ಇಂಥಾ ಸದ್ಗುರುವಾದ ನಿನ್ನನ್ನು ವರ್ಣಿಸುವಾಗ್ಗೆ ನನ್ನ ಮತಿಯು ಕುಂಠಿತವಾಗಿ ಎಲ್ಲೆಲ್ಲಿಯೂ ಸಾಗುವದಿಲ್ಲ ಯಾಕೆಂದರೆ ಈ ಜಗತ್ರಯದಲ್ಲಿ ನಿನ್ನ ಸಮಾನರು ಯಾರ್ಯಾರು ಇಲ್ಲವು, ತೀರ್ಥ ಕ್ಷೇತ್ರಾದಿಗಳಲ್ಲಿ ಮಾಡಿದ ಯಾವ ಫಲವು ಕಾಲಾಂತರದಲ್ಲಿ ಸಿಗುತ್ತದೆ. ಆದರೆ ನಿನ್ನ ದರ್ಶನದ ಫಲವು ತತ್ಕಾಲವೇ ಸಿಗುವದೆಂದು ಶ್ರುತಿಗಳಲ್ಲಿ ಪ್ರಸಿದ್ಧವಾಗಿರುವದು. ನೀನು ನಿರ್ಗುಣದೊಳಗೆ ಇದ್ದೀಯೆಂದರೆ, ಭಕ್ತ ಜನರನ್ನು ಯಾರು ಉದ್ಧರಿಸಬೇಕು, ಎಂದು ನೀನು ದೇಹಧಾರಿಯಾಗಿ ಬಂದಿರುವಿ; ಇಂಥಾ ನಿನ್ನ ಕಥೆಯು ಜಗತ್ರಯಕ್ಕೆ ಪಾವನಕರವಾಗಿರುತ್ತದೆ. ಯಾವಾಗ ಭಕ್ತರಿಗೆ ಸಂಕಷ್ಟಗಳು

ಬರುವವೋ ಆ ಕ್ಷಣವೇ ತಾನೇ ಸ್ವತಃ ಹೋಗಿ ಅವನ್ನು ಪರಿಹರಿಸಬೇಕೆಂಬ ನಿಶ್ಚಯವನ್ನು ಮಾಡಿ, ದೇಹವನ್ನು ಧರಿಸಿಕೊಂಡು, ಈ ದುಃಖಮಯವಾದ ಲೋಕಕ್ಕೆ ಬಂದಿರುತ್ತಿ. ಸಂಕಷ್ಟ ಬಂದಾಗ ನೀನು ಭಕ್ತರನ್ನು ರಕ್ಷಿಸುವಿ. ಆಮೇಲೆ ಅವರು ಪ್ರೇಮಯುಕ್ತರಾಗಿ ನಿನ್ನನ್ನು ಸೇವಿಸಲಿಕ್ಕೆ ಆದರ ಉಳ್ಳವರಾಗುವರು. ಅದರಿಂದ ಅವರು ಚಿತ್ತಶುದ್ಧಿಯನ್ನು ಹೊಂದಿ ಮುಂದೆ ಜ್ಞಾನಕ್ಕೆ ಅಧಿಕಾರಿಗಳಾಗುವರು. ಸದ್ಗುರುಮಾತೆಯಾದ ನೀನು ದುರ್ಜನರಿಗೋಸ್ಕರ ಸಹಾ ತರಣೋಪಾಯವನ್ನು ಹುಡುಕಿರುತ್ತೀ. ಅವರು ಛಲನ ಮಾಡಿದರೆಂದರೆ ಅವರಿಗೆ ದಯೆ ತೋರಿಸಿ ನೀನು ಅವರನ್ನು ಉದ್ಧರಿಸುವಿ. ಇಂಥಾ ದಯಾಳುವಾದ ಹೇ ಸದ್ಗುರುವೇ, ಭಕ್ತರ ಮೇಲೆ ಸದಾ ಕೃಪೆಯ ಛಾಯೆಯನ್ನು ಹಾಕಿ ನೀನು ಶ್ರಮ ಪರಿಹರಿಸುವಿ. ಹೇ ದೇವನೇ, ನಿನ್ನ ಕಥೆಯನ್ನು ಈಗ ನೀನೇ ನಿರೂಪಿಸುವಂಥವನಾಗು. ಸಮುದ್ರ ತೀರದಲ್ಲಿ ಕುಮಟಾ ಎಂಬ ನಗರವಿರುವದು. ಅಲ್ಲಿ ಹರಿಹರನೆಂಬ ಒಬ್ಬ ಭಕ್ತನಿರುವನು. ಆತನು ಬಹು ದರಿದ್ರಾವಸ್ಥೆಯಲ್ಲಿ ಸಂಸಾರ

ನಡಿಸುವವನು. ಆತನ ಪತ್ನಿಯ ಹೆಸರು ಸರಸ್ವತಿ. ಆ ದಂಪತಿಗಳು ಬಹು ಪ್ರೇಮಯುಕ್ತರಾಗಿ ಕೃಷ್ಣನಾಮವನ್ನು ಜಪಿಸುತ್ತಾ ಪ್ರತಿನಿತ್ಯ ಶ್ರೀಪತಿಯನ್ನು ಭಜಿಸುತ್ತಿದ್ದರು. ನಿತ್ಯದಲ್ಲಿ ಭಜನೆ ಮತ್ತು ನಾಮಸ್ಮರಣೆ ಮಾಡುತ್ತಿರುವುದರಿಂದ ಅವರ ಚಿತ್ತವು ನಿರ್ಮಲವಾಗಿ ಅವರಿಗೆ ಮಹಾ ವೈರಾಗ್ಯ ಪ್ರಾಪ್ತಿಯಾಯಿತು. ಮತ್ತು ಸಂಸಾರ ಕಾರ್ಯಗಳನ್ನು ಮಾಡುವುದರಲ್ಲಿ ಬಹು ಬೇಸರ ಪಡತೊಡಗಿದರು. ಪ್ರಪಂಚದಲ್ಲಿ ಬಹು ದುಃಖವಾಗುವದು ಎಂದು ಹೃದಯದಲ್ಲಿ ಬಹಳ ತಳಮಳಪಟ್ಟು, ಏನು ಮಾಡಬೇಕೆಂದು ತಿಳಿಯದೆ - "ಹೇ ಶ್ರೀಹರಿ, ನೀನೇ ನಮಗೆ ದುಖದಿಂದ ಬಿಡುಗಡೆ ಮಾಡು" ಎಂದು ಪ್ರಾರ್ಥಿಸುತ್ತಿದ್ದರು. ಆ ಸಮಯದಲ್ಲಿ, ಹುಬ್ಬಳ್ಳಿಯಲ್ಲಿ ಸಿದ್ಧಾರೂಢರೆಂಬ ಯತೀಶ್ವರರು ಇರುವರು, ಸಾಕ್ಷಾತ್ ಪರಮೇಶ್ವರನೇ ನರರೂಪದಿಂದ ಬಂದಿರುವೆನೆಂದು ಅವರನ್ನು ಎಲ್ಲರೂ ಮನ್ನಿಸುವರು, ಎಂಬ ಈ ವಾರ್ತೆಯು ಅವರಿಗೆ ಕೇಳಿ ಬಂತು. ಆಗ್ಗೆ ಅತ್ಯಂತ ಹರ್ಷಚಿತ್ತರಾಗಿ, ಕೂಡಲೇ ಹುಬ್ಬಳ್ಳಿಗೆ ಹೊರಟು ಹೋಗಬೇಕೆಂಬ ಕುತೂಹಲದಿಂದ ಎಲ್ಲಾ ಸಂಸಾರ

ಭ್ರಾಂತ್ರಿಯನ್ನು ತ್ಯಜಿಸಿ, ಹುಬ್ಬ ಳ್ಳಿಗೆ ಹೊರಟು ಬಂದರು. ಹುಬ್ಬ ಳ್ಳಿಗೆ ಬಂದು ಜನರಿಗೆ ವಿಚಾರಿಸುತ್ತಾರೆ- "ಹೇ ಬಂಧುಗಳಿರಾ, ನಿರಭಿಮಾನತ್ವದಿಂದ ಶರಣ ಬಂದಿರುವ ದೀನ ಮತ್ತು ಅನಾಥರನ್ನು ಪಾಲಿಸುವಂಥಾ ಆ ಸಿದ್ಧರಾಯನು ಎಲ್ಲಿರುವನು ?" ಎಂದಾಗ ಅವರು "ಭಕ್ತ ಕಾಮ ಕಲ್ಪ ದ್ರುಮನಾಗಿಯೂ, ಆತ್ಮಾರಾಮನಾಗಿಯೂ, ಭವಶ್ರಮ ಪರಿಹಾರ ಮಾಡುವಂಥವನಾಗಿಯೂ ಇರುವ ಆತನು ಸಿದ್ಧಾಶ್ರಮದಲ್ಲಿರುವನು" ಎಂದು ಹೇಳಿದರು. ಆ ಕೂಡಲೇ ಹರಿಹರ ಮತ್ತು ಸರಸ್ವತಿ ಅತ್ಯಂತ ಪ್ರೇಮಭರಿತರಾಗಿ, ಸಿದ್ಧಾಶ್ರಮಕ್ಕೆ ಶೀಘ್ರವಾಗಿ ಬಂದು ಅಲ್ಲಿಯ ಶೋಭಾ ನೋಡಿ ಬಹು ಆನಂದ ಭರಿತರಾದರು. ಆ ಸದ್ಗುರು ರೂಪವು ಜ್ಞಾನ ತೇಜದಿಂದ ಪ್ರಕಾಶಮಾನವಾಗಿಯೂ, ಅನುಪಮವಾಗಿಯೂ, ದರ್ಶನ ಮಾತ್ರದಿಂದ ತ್ರಿತಾಪಗಳನ್ನು ಹರಣ ಮಾಡುವಂಥದ್ದಾಗಿಯೂ, ಜನ್ಮಾಂತರಗಳಲ್ಲಿ ಮಾಡಿದಂತ ಪಾಪವನ್ನು ಭಸ್ಮ ಮಾಡುವ ಸಾಮರ್ಥ್ಯ ಉಳ್ಳಂಥಾದ್ದಾಗಿರುವದನ್ನು ಅವರು ನೋಡಿದರು. ಅತಿ

ಸೋಜ್ವಲವಾದ ಮುಖಮುದ್ರೆಯುಳ್ಳ ಸಿದ್ದಾರೂಢ ಸದ್ಗುರುಗಳನ್ನು ಕಂಡು ಆ ದಂಪತಿಗಳು ನೇತ್ರಗಳಿಂದ ಆನಂದ ಭಾಷ್ಪಗಳನ್ನು ಸುರಿಸುತ್ತಾ, ಸಿದ್ಧಚರಣದಲ್ಲಿ ಮಸ್ತಕವನ್ನಿಟ್ಟರು. ಆಗ ಆ ಕರುಣಾಕರನು ಅವರನ್ನು ಎಬ್ಬಿಸಿ, ಅವರ ಅನುಪಮ ಪ್ರೇಮರಸವನ್ನು ತಿಳಿದು, ಹೃದಯದಲ್ಲಿ ದಯಾಭರಿತನಾಗಿ ಅವರನ್ನು ಕುರಿತು ಅನ್ನುತ್ತಾನೆ - ಹೇ ಪುಣ್ಯ ದಂಪತಿಗಳಿರಾ, ನೀವು ಎಲ್ಲಿಂದ ಆಗಮನ ಮಾಡಿದಿರಿ? ನಿಮ್ಮ ಅಪೇಕ್ಷೆ ಏನಿರುವದು ? ಹೇಳಿರಿ' ಸದ್ಗುರುಗಳ ಮೃದು ವಚನವನ್ನು ಕೇಳಿ, ಹರಿಹರನು ಅನ್ನುತ್ತಾನೆ- 'ಹೇ ದಯಾಘನರಾದ ಸದ್ಗುರುಗಳೇ, ನಿಮ್ಮ ದರ್ಶನದ ಉದ್ದೇಶವಾಗಿ ನಾವು ಧಾವಿಸಿ ಇಲ್ಲಿಗೆ ಬಂದಿರುವೆವು. ನಾವು ಸಂಸಾರದಲ್ಲಿ ಬಹಳ ತಾಪವನ್ನು ಹೊಂದಿ ಅದರೊಳಗಿಂದ ಬಿಡಿಸುವಂಥವರ್ಯಾರನ್ನೂ ಕಾಣದೆ ದಯಾಳುಗಳು ನೀವಿದ್ದೀರೆಂಬ ವಾರ್ತೆಯನ್ನು ಕೇಳಿ, ನಿಮ್ಮ ಚರಣಗಳಿಗೆ ಶರಣು ಬಂದಿರುತ್ತೇವೆ. ಸಂಸಾರವು ಬಹು ದುಃಖಮಯವಾಯಿತು. ಅದರೊಳಗಿಂದ ತಾರಣೋಪಾಯವು

ಏನೂ ಕಾಣದೆ ದೃಢವಾಗಿ ನಿಮ್ಮ ಚರಣಗಳನ್ನು ಹಿಡಿದಿರುತ್ತವೆ. ಹೇ ಸದ್ಗುರು ಮಾತಾ, ನೀನೇ ನಮ್ಮನ್ನು ತಾರಿಸು". ಅವರ ಇಂಥಾ ಕರುಣಾ ವಚನವನ್ನು ಕೇಳಿ ಸದ್ಗುರುಗಳು ಅತ್ಯಂತ ಕೃಪೆಯಿಂದ ದ್ರವಿಸಿ, "ಭಯ ಪಡಬೇಡಿರಿ' ಎಂದು ಅವರಿಗೆ ಅಭಯ ವಚನವನ್ನು ದಯಪಾಲಿಸಿದರು. ಕೂಡಲೇ ದಂಪತಿಗಳು ಬಹು ಆನಂದಯುಕ್ತರಾಗಿ, ಅಂದಿನಿಂದ ಸದ್ಗುರು ಆಜ್ಞೆಯಿಂದ ಮಠದಲ್ಲೆ ಇರುತ್ತಿದ್ದು, ದೇಹಾಭಿಮಾನವನ್ನು ಬಿಟ್ಟು ಅನನ್ಯ ಭಾವದಿಂದ ಗುರುಸೇವೆಯನ್ನು ಮಾಡುತ್ತಿದ್ದರು. ನಿತ್ಯದಲ್ಲಿಯೂ ವೇದಾಂತ ಶ್ರವಣ ಮಾಡುತ್ತಿದ್ದು, ಅವರ ಚಿತ್ತಕ್ಕೆ ಶಾಂತಿ ಲಭಿಸಿತು. ಉದರ ನಿರ್ವಾಹಾರ್ಥವಾಗಿ ಅವರು ಭಿಕ್ಷಾಟನವನ್ನು ಅವಲಂಬಿಸಿದರು. ಅವರ ಅದ್ಭುತ ಪ್ರೇಮವನ್ನು ನೋಡಿ, ಜನರೆಲ್ಲಾ ಆಶ್ಚರ್ಯಭರಿತರಾಗಿ ಅವರಿಗನ್ನುತ್ತಾರೆ, "ನೀವು ಧನ್ಯರು, ಧನ್ಯರು. ಆ ಸಿದ್ಧ ದಯಾಘನನ ಕೃಪೆಯನ್ನು ಸಂಪಾದಿಸಿಕೊಂಡಿರಿ", ಈ ಪ್ರಕಾರ ಒಂದು ವರ್ಷವಾಯಿತು. ಸದ್ಗುರುವಿನ ಪ್ರೇಮವು ಆಂತರ್ಯದಲ್ಲಿ ಪೂರಿತವಾಗುವಂಥಾದ್ದಾಯಿತು. ಈ

ಸಮಯದಲ್ಲಿ ಆ ದಂಪತಿಗಳಿಗೆ ಕುಮಟಾಗೆ ಹೋಗಿ ಬರುವ ಒಂದು ಅನಿವಾರ್ಯ ಕಾರ್ಯವು ಬಂದೊದಗಿತು. ಆಗ ಸದ್ಗುರು ವಿರಹವಾಗುವದೆಂದು ತಿಳಿದು ಬಹು ತಳಮಳಿಸತೊಡಗಿದರು. ನೇತ್ರಗಳಿಂದ ದಳದಳನೇ ಅಶ್ರುಗಳು ಸುರಿಯುತ್ತಿದ್ದವು. ಸಿದ್ಧ ಸದ್ಗುರುಗಳ ಸಮೀಪ ಬಂದು, "ಹೇ ದಯಾನಿಧೇ, ನಮಗೆ ತೀವ್ರವಾಗಿ ಹಿಂತಿರುಗಿ ಕರಿಸಿಕೊಳ್ಳಿರಿ' ಎಂದು ದೈನ್ಯಭಾವದಿಂದ ಪ್ರಾರ್ಥಿಸಿದರು. ಆಗ್ಗೆ ಸದ್ಗುರುಗಳು ಅನ್ನುತ್ತಾರೆ - "ನೀವು ಮನಸ್ಸಿನಲ್ಲಿ ಏನೇನೂ ಚಿಂತೆ ಮಾಡಬೇಡಿರಿ. ಗುರುಚಿಂತನ ಅಖಂಡವಾಗಿ ಮಾಡುತ್ತಿದ್ದರೆ, ನಿಮಗೆ ಮಾರ್ಗದಲ್ಲಿ ಏನೇನೊ ಭಯವಿರಲಾರದು. ನಾನು ಯಾವಾಗಲೂ ನಿಮ್ಮ ಬೆನ್ನಿಗಿರುವೆನೆಂದು ನೀವು ಹೃದಯದಲ್ಲಿ ದೃಢವಾಗಿ ನಂಬಿರಿ.ಮತ್ತು ನಿರ್ಭಯ ಚಿತ್ತರಾಗಿ ಹಗಲು ರಾತ್ರಿ ನಾಮ ಜಪವನ್ನು  ಮಾಡುತ್ತಾ, ನಡೆಯಿರಿ." ಸದ್ಗುರು ವಚನವನ್ನು  ಕೇಳಿ ಆ ದಂಪತಿಗಳು ಅತ್ಯಾನಂದಭರಿತರಾಗಿ, ಸದ್ಗುರು ಚರಣಗಳಿಗೆ ಮಸ್ತಕವನ್ನಿಟ್ಟು, ಕುಮಟಾಗೆ ಹೋಗುವ ರಸ್ತೆಯ ಮೇಲೆ ನಡೆದು ಹೋದರು. ರಸ್ತೆ ಹಿಡಿದು

ಹೋಗುವಾಗ್ಗೆ ಸದ್ಗುರುನಾಮವನ್ನು ಬಹು ಪ್ರೇಮದಿಂದ ಉಚ್ಚರಿಸುತ್ತಿದ್ದರು. ಮತ್ತು ಆಗಾಗ್ಗೆ ಸದ್ಗುರು ಕಥೆಗಳನ್ನೆ ವರ್ಣಿಸುತ್ತಾ ಅಷ್ಟಭಾವಗಳನ್ನು ಹೊಂದಿ, ನೇತ್ರಗಳು ಅಶ್ರುಪೂರ್ಣವಾಗಿ, ಸದ್ಗುರುಮೂರ್ತಿಯನ್ನು ಚಿಂತಿಸುತ್ತಾ ನಡಿಯುತ್ತಿದ್ದರು. ಹೀಗೆ ಹೋಗುತ್ತಿರುವಾಗ ಮುಂದೆ ಮಹಾ ಅರಣ್ಯವು ಪ್ರಾಪ್ತವಾಯಿತು. ರಸ್ತೆಯ ಎರಡೂ ಪಾರ್ಶ್ವಗಳಲ್ಲಿ ಘನವೃಕ್ಷಗಳು ಬೆಳೆದು ನಿಂತಿದ್ದಕ್ಕಾಗಿ ಹಗಲಿನಲ್ಲಿ, ಅಂಧಕಾರವು ತುಂಬಿತ್ತು. ಮಾರ್ಗದ ಮೇಲೆ ಕಿಂಚಿತ್ ಪ್ರಕಾಶ ಬೀಳುತ್ತಿತ್ತು. ಅರಣ್ಯದೊಳಗಿಂದ ಮೃಗ ಪಕ್ಷ್ಯಾದಿಗಳ ಭಯಂಕರವಾದ ಘೋಷವು ಕೇಳಿಸುತ್ತಿತ್ತು. ಆದರೆ ಭಜನವನ್ನು ಮಾಡುತ್ತಾ ನಡಿಯುತ್ತಿದ್ದ ಆ ದಂಪತಿಗಳ ಮನಸ್ಸು ನಿರ್ಭಯವಾಗಿತ್ತು. ಈ ಪ್ರಕಾರ ಅವರು ಹೋಗುತ್ತಿರುವಾಗ ಹರಿಹರನು ಏನೋ ನಿಮಿತ್ತದಿಂದ ಹಿಂದುಳಿದನು. ಆತನ ಪತ್ನಿಯು, ಮುಖದಿಂದ ನಾಮವನ್ನು ಉಚ್ಚರಿಸುತ್ತ ಶರೀರ ವಿಸ್ಮೃತಿಯನ್ನು ಹೊಂದಿದವಳಾಗಿ ನೆಟ್ಟಗೆ ಮುಂದೆ ನಡೆದಳು. ಅಷ್ಟರೊಳಗೆ, ಪಾರ್ಶ್ವದ ಕಂಟಿಯೊಳಗಿಂದ ಒಂದು ಮಹಾ

ವ್ಯಾಘ್ರವು ತುಸು ಅಂತರದಲ್ಲಿ ಸರಸ್ವತಿಯ ಮುಂದೆ ಬಂದು ನಿಂತು, ಆಕೆಯನ್ನು ನೋಡುತ್ತಿತ್ತು. ಸರಸ್ವತಿಗೆ ದೇಹಭಾನವಿದ್ದಿಲ್ಲ. ಒಮ್ಮೆ ಅಕಸ್ಮಾತ್ ಮುಂದೆ ನೋಡಿದಳು. ಮತ್ತು ಕ್ಷಣಮಾತ್ರ ತಟಸ್ಥಳಾದಳು, ಕೂಡಲೇ ಆ ವ್ಯಾಘ್ರವು ಮಹಾಗರ್ಜನೆ ಮಾಡಿತು. ಆ ಗರ್ಜನೆಯು ವನದಲ್ಲೆಲ್ಲಾ ಪ್ರತಿಧ್ವನಿಯಾಗುತ್ತಾ, ತುಂಬಿತು..ಅದನ್ನು ಕೇಳಿ ಆ ಅಬಲೆಯು ಥರಥರನೆ ನಡುಗಿದಳು, ಮತ್ತು ಸದ್ಗುರುವಿನ ಸ್ಮರಣೆ ಮಾಡುವಂಥವಳಾದಳು. ಆ ಹುಲಿಯಾದರೂ ಜಿಗಿಯುತ್ತಾ ಬಂದು ಆಕೆಗೆ ಸಮೀಪಿಸಿತು. ಇನ್ನೊಮ್ಮೆ ಜಿಗಿದು ಆಕೆಯ ಮೇಲೆ ಬೀಳುತ್ತಿತ್ತು. ಅಷ್ಟರಲ್ಲಿ ಆಕೆಯು "ಸಿದ್ಧಾರೂಢಾ, ಓಡಿ ಬಂದು ನನ್ನನ್ನು ರಕ್ಷಿಸು' ಎಂದು ಚೀರಿದಳು. ಕೂಡಲೆ ಆ ಸದ್ಗುರುನಾಥನು ಪ್ರಕಟನಾಗಿ,ಆಕೆಯ ಬೆನ್ನು ಹಿಂದೆ ನಿಂತು, ಒಂದು ಹಸ್ತವನ್ನು, ಬೀಳುವಂಥ ಸರಸ್ವತಿಯ ಹೆಗಲ ಮೇಲಿಟ್ಟು ಆಕೆಯನ್ನು ಆಧರಿಸಿ ಹಿಡಿದು, ನೀನು ಭಯಪಡಬೇಡವೆಂದು ಹೇಳಿದನು. ಮತ್ತೊಂದು ಹಸ್ತವನ್ನು ಎತ್ತಿ ವ್ಯಾಘ್ರಕ್ಕೆ ನಿಲ್ಲು" ಅನ್ನಲಾಗಿ, ಆ ವ್ಯಾಘ್ರವು ಈ ದಿವ್ಯ ಪುರುಷನನ್ನು ನೋಡಿ,

ತತ್ಕಾಲಕ್ಕೆ ನೆಲಕ್ಕೆ ಬಿದ್ದು ಮೂರ್ಛೆ ಹೊಂದಿತು. ಇಷ್ಟರಲ್ಲಿ, ಹರಿಹರನು ಸಮೀಪ ಬಂದು ನೋಡಲು, ಪ್ರತ್ಯಕ್ಷ ಸದ್ಗುರುವು ನಿಂತದ್ದನ್ನು ಕಂಡು - 'ಹೇ ದೀನಾನಾಥಾ, ಸಿದ್ಧರಾಯನೇ, ನಮ್ಮನ್ನು ಸಂಕಷ್ಟದಲ್ಲಿ ರಕ್ಷಿಸಿದಿ' ಅಂದನು.

ಸರಸ್ವತಿಯಾದರೂ ದೇಹಸ್ವಭಾವವಾದ ಭಯದಿಂದ ಮೂರ್ಛಾಗತಳಾಗಿ ಬೀಳುವಷ್ಟರಲ್ಲಿ, ಸಿದ್ಧರು ಆಕೆಯ ಹೆಗಲಿಗೆ ಹಿಡಿದು ಆಧರಿಸಿದರು. ಸರಸ್ವತಿಯು ಆಗ ತಿರುಗಿ, ಸತೇಜ ಸದ್ಗುರು ಮೂರ್ತಿಯನ್ನು ನೋಡಿ ಗದ್ಗದಿತಳಾದಳು.

ದಂಪತಿಗಳಿಬ್ಬರಿಗೂ ಅಶ್ರುಧಾರೆಗಳು ನಡೆದವು. ಅವರಂದದ್ದು - 'ಹೇ ಕರುಣಾಕರನೆ ಸಂಕಷ್ಟದಲ್ಲಿ ಪ್ರಾಪ್ತನಾದಿ. ಈ ನಮ್ಮ ಶರೀರಗಳನ್ನು ನಿನ್ನ ಮೇಲಿಂದ ನಿವಾಳಿಸಿ ಚೆಲ್ಲುವೆವು. ನಿನ್ನನ್ನು ಹುಬ್ಬಳ್ಳಿಯಲ್ಲಿ ಬಿಟ್ಟು ಬಂದಿದ್ದೆವು. ನೀನು ಇಷ್ಟು ದೂರ ಹ್ಯಾಗೆ ಒಮ್ಮಿಂದೊಮ್ಮೆ ಪ್ರಾಪ್ತನಾದೆ ತಂದೆಯೇ, ನಮ್ಮ ಸಂಕಟ ಕಾಲದಲ್ಲಿ ನೀನು ಧಾವನ ಮಾಡಿದಿ, ಹೇ ದಯಾವಂತನೇ''.

ಭಾವಿಕ ದಂಪತಿಗಳ ಈ ಭಾಷಣವನ್ನು ಕೇಳಿ, ಆ ದಯಾಘನನಾದ ಸದ್ಗುರುವು ಗದ್ಗದಿತನಾಗಿ - ''ನಿಮ್ಮ

ಸಮೀಪದಲ್ಲಿ ನಾನಿರುವೆನೆಂದು ನಿಮಗೆ ವಚನ ಕೊಟ್ಟಿದ್ದೇನು. ಎಲ್ಲೆಲ್ಲಿ ನನ್ನ ಭಕ್ತರಿರುವರೋ ಅವರ ಹಿಂದೆ ಮುಂದೆ ನಾನು ಸದಾಕಾಲದಲ್ಲಿ ಇರುವೆನು. ಯಾರು ನನ್ನ ನಾಮಸ್ಮರಣೆಯಲ್ಲಿಯೇ ಅಖಂಡ ರತರಾಗಿರುವರೋ, ಅವರ ಸಲುವಾಗಿ ನಾನು ಯಾವಾಗಲೂ ಚಿಂತೆ ಮಾಡುತ್ತಿರುತ್ತೇನೆ. ನೀವು ಏನೇನೊ ಭಯಪಡಬೇಡಿರಿ," ಎಂದು ಸದ್ಗುರುಗಳು ಅನ್ನುವಾಗ, ಆ ವ್ಯಾಘ್ರವು ಮೆಲ್ಲಗೆ ಚೇತರಿಸಿ ಎದ್ದು ಅವರ ಕಡೆಗೆ ಬರತೊಡಗಿತು. ಅದನ್ನು ನೋಡಿ, ಆ ದಂಪತಿಗಳಿಬ್ಬರೂ ಹೆದರಿ, ಸಿದ್ಧರ ಪೃಷ್ಠ ಭಾಗದಲ್ಲಿ ಹೋಗಿ ನಿಂತುಕೊಂಡರು. ಸದ್ಗುರುಗಳಾದರೂ ಹುಲಿಯ ಸಮೀಪ ಹೋಗಿ ಅದರ ಬೆನ್ನು ಮೇಲೆ ಥಪ್ಪರಿಸಿದರು. ಆ ಕೂಡಲೇ ಅದು ನಾಯಿಯಂತೆ ದೀನಭಾವದಿಂದ ಸಿದ್ಧರ

ಪಾದಕ್ಕೆ ಬಿತ್ತು. ಇದನ್ನು ನೋಡಿ ಆಶ್ಚರ್ಯಪಟ್ಟ ಆ ದಂಪತಿಗಳು ಆ ಭಯವನ್ನು ಬಿಟ್ಟು ಮುಂದೆ ಬಂದರು. ಆಗ ಸಿದ್ಧರಾಜರು ಆ ಹುಲಿಯ ಕಿವಿಯಲ್ಲಿ ಏನೋ ಉಸುರಿದರು. ಕೂಡಲೇ ಆ ವನಚರವು ಎದ್ದು ಹುಂಕಾರ ಕೊಟ್ಟು,

ವನದೊಳಗೆ ಹೊರಟು ಹೋಯಿತು. ಅನಂತರ ಸಿದ್ಧರು ಬಹು ಕೃಪೆಯಿಂದ ಆ ದಂಪತಿಗಳಿಗೆ ಪುನಃ ಆಶ್ವಾಸನವನ್ನು ಕೊಟ್ಟು, ಕೆಲವು ಹೆಜ್ಜೆ ಅವರ ಕೂಡ ನಡೆಯುತ್ತ ಆಕಸ್ಮಾತ್ತಾಗಿ ಅದೃಶ್ಯರಾದರು. ದಂಪತಿಗಳಾದರೂ ತಮಗೆ ಸದ್ಗುರುಗಳು ಬಂದು ರಕ್ಷಣೆ ಮಾಡಿದ್ದನ್ನು ಪುನಃ ಪುನಃ ಸ್ಮರಿಸುತ್ತಾ ಆನಂದಭರಿತರಾಗಿ, ಆ ಯೋಗೀಶನನ್ನೇ ಹೃದಯದೊಳಗೆ ಧರಿಸಿಕೊಂಡು, ಸಾವಕಾಶ ನಡಿಯುತ್ತಾ ತಕ್ಕ ಕಾಲದಲ್ಲಿ ಕುಮಟಾಗೆ ಪ್ರಾಪ್ತರಾದರು. ಅಲ್ಲಿ ತಮ್ಮ ಕಾರ್ಯವನ್ನು ತೀವ್ರವಾಗಿ ಮುಗಿಸಿ ಮರಳಿ ಹುಬ್ಬಳ್ಳಿ ಕಡೆಗೆ ಪ್ರಯಾಣ ಮಾಡುತ್ತ, ಪೂರ್ವದಲ್ಲಿ ವ್ಯಾಪ್ರದರ್ಶನವಾದ ಸ್ಥಾನಕ್ಕೆ ಬಂದರು. ಆ ಸಮಯದಲ್ಲಿ ತಮ್ಮ ಮುಂದೆಯೇ ರಸ್ತೆಯ ಮೇಲೆ ಅದೇ ವ್ಯಾಘ್ರವನ್ನು ಕಂಡರು. ಆದರೆ ಅದರಲ್ಲಿ ಮೊದಲಿನ ಉಗ್ರ ಲಕ್ಷಣಗಳಿರಲಿಲ್ಲ. ಇವರನ್ನು ಕಂಡ ಕೂಡಲೇ ನಮ್ರ ಭಾವದಿಂದ ಭೂಮಿಯ ಮೇಲೆ ಸುಮ್ಮನೆ ಬೀಳುವಂಥಾದ್ದಾಯಿತು. ಆ ವ್ಯಾಘ್ರವನ್ನು ನೋಡಿ ಸಂಶಯಯುಕ್ತರಾಗಿ ಆ ದಂಪತಿಗಳು ನಿಂತರು. ಹುಲಿಯು

ಏಳದಿರುವದನ್ನು ನೋಡಿ ಮೆಲ್ಲಗೆ ಮುಂದೆ ಹೆಜ್ಜೆ ಇಡುವಾಗ್ಗೆ, ಆ ವ್ಯಾಘ್ರವು ದೀನ ಭಾವದಿಂದ ಅವರ ಕಡೆಗೆ ನೋಡುತ್ತಿತ್ತು. ಆಗ್ಗೆ ಹರಿಹರನು ಪತ್ನಿಯನ್ನು ಕುರಿತು- "ಈ ವ್ಯಾಘ್ರದಲ್ಲಿ ದುಷ್ಟ ಲಕ್ಷಣಗಳು ಕಾಣಿಸುವದಿಲ್ಲ. ಆದರೂ ಏನು ಮಾಡೀತು ತಿಳಿಯಲಾಗದು. ಸದ್ಗುರುವೇ ನಮ್ಮನ್ನು ರಕ್ಷಿಸಬೇಕು." ಎಂದು ಅವರಿಬ್ಬರೂ ವ್ಯಾಘ್ರದ ಸಮೀಪಕ್ಕೆ ಬಂದರು. ಸಮೀಪ ಬಂದ ಕೂಡಲೇ, ಹುಲಿಯು ಅವರ ಪಾದಕ್ಕೆ ಬಿದ್ದು, ಶಾಂತರೂಪದಿಂದೆದ್ದು, ಅವರ ಮುಂದೆ ನಡೆಯತೊಡಗಿತು.ಕೆಲವು ಹೊತ್ತಿನವರೆಗೆ ಅವರ ಮುಂದೆ ಮುಂದೆ ನಡೆಯುತ್ತಾ, ಆ ಹುಲಿಯು ಪುನಃ ಆ ದಂಪತಿಗಳ ಪಾದಕ್ಕೆರಗಿ ಅರಣ್ಯದೊಳಗೆ ಹೋಯಿತು. ಆಗ ಅವರು ನಿಶ್ಚಿಂತರಾದರು. ಮತ್ತು ಮನಸ್ಸಿನಲ್ಲಿ ಬಹಳ ಆಶ್ಚರ್ಯಪಟ್ಟು, ಸದ್ಗುರು ಮಹಿಮೆ ವರ್ಣಿಸಲಸಾಧ್ಯವೆಂದು ಅಂದುಕೊಂಡು, ಹುಬ್ಬಳ್ಳಿಗೆ ಬಂದು ಮುಟ್ಟಿ, ಸಿದ್ಧಾಶ್ರಮಕ್ಕೆ ಬಂದರು. ಸದ್ಗುರುಗಳಿಗೆ ಭೆಟ್ಟಿಯಾಗಿ ಆತನ ಚರಣಗಳ ಮೇಲೆ ಮಸ್ತಕವನ್ನಿಟ್ಟು, ಅನ್ನುತ್ತಾರೆ - 'ಹೇ ಭಕ್ತ ಸಖನೇ ಧನ್ಯ

ಧನ್ಯನು. ಭಕ್ತ ರಕ್ಷಣಾರ್ಥವಾಗಿ ನೀನು ಯಾವಾಗಲೂ ಎಚ್ಚರವಾಗಿರುವಿ. ವಿಚಾರಿಸಿ ನೋಡಿದರೆ, ನೀನು ಇಲ್ಲೇ ಇದ್ದಿ, ಆದರೆ ಅರಣ್ಯದಲ್ಲಿ, ಯಾವಾಗ್ಗೆ ವ್ಯಾಘ್ರವು ಸರಸ್ವತಿಯ ಮೇಲೆ ಹಾರಲಿಕ್ಕೆ ಬಂತು, ಆಗ ರಕ್ಷಿಸಲಿಕ್ಕೆ ನೀನು ಅಲ್ಲಿ ಪ್ರಕಟವಾದಿ'. ಇದನ್ನು ಕೇಳಿ ಸದ್ಗುರುನಾಥನು ಅವರಿಗೆ ಅಜ್ಞ ಭಾವವನ್ನು ತೋರಿಸಿ, ನಡೆದ ವರ್ತಮಾನ ಕೇಳಿದರು. ಹರಿಹರನು ಅರಣ್ಯದಲ್ಲಿ ನಡೆದ ಅಪೂರ್ವ ಚರಿತ್ರೆಯನ್ನು ನಿವೇದಿಸಿದನು. ಅದನ್ನು ಕೇಳಿದ ಭಕ್ತ ಜನರೆಲ್ಲಾ ಆಶ್ಚರ್ಯ ಚಕಿತರಾದರು. ಸಿದ್ಧರಂದರು "ಸದ್ಗುರು ಭಾವವು ಯಾವಾಗಲೂ ಸತ್ಯವಾಗಿ ತಾರಕವಾಗಿರುತ್ತದೆ. ಯಾಕೆಂದರೆ ಆ ಸಮರ್ಥನಾದ ಸದ್ಗುರುವು ಭಕ್ತಕಾರ್ಯದಲ್ಲಿ ಸರ್ವದಾ ಜಾಗ್ರತನಾಗಿರುತ್ತಾನೆ". ಈ ವಚನವನ್ನು ಕೇಳಿದವರೆಲ್ಲಾ ಜಯ ಜಯಕಾರ ಮಾಡಿ, " ಸದ್ಗುರುವಿನ ಮಹಿಮೆ ವರ್ಣಿಸಲಶಕ್ಯವು. ಆತನ ಕೀರ್ತಿಯಿಂದ ಚರಾಚರವು ತುಂಬಿರುತ್ತದೆ' ಎಂದು ಅನ್ನುವಂಥವರಾದರು. ಅಂದಿನಿಂದ ಆ ದಂಪತಿಗಳು ಸುಖದಿಂದ ಸದ್ಗುರುಗಳ ಚರಣ ಸನ್ನಿಧಿಯಲ್ಲೇ

ಇರತೊಡಗಿದರು... ಹೇ ಶ್ರೋತಾ ಜನರುಗಳಿರಾ, ತ್ರಿಜಗತ್ತಿನೊಳಗೆ ಪವಿತ್ರವಾದ ಈ ಕಥೆಯನ್ನು ನೀವು ಸಂಪೂರ್ಣವಾಗಿ ಕೇಳುವಂಥವರಾದಿರಿ, ಶ್ರೀ ಸಿದ್ಧಾರೂಢರಂಥಾ ಅವತಾರ ಪುರುಷರ ಚರಿತ್ರವು ಸರ್ವದಾ ಅಧ್ಯಾತ್ಮ ವಿಚಾರಕ್ಕೂ  ಸಮ್ಮತವಾಗಿರುತ್ತದೆ. ಯಾಕೆಂದರೆ ಸಗುಣದಲ್ಲಿಯೂ, ನಿರ್ಗುಣದಲ್ಲಿಯೂ, ಅವರ ಲಕ್ಷ್ಯ ವಿದ್ದು, ಅವರ ವರ್ತನವು ಉಭಯಾತ್ಮಕವಾಗಿರುವದು. ಸಗುಣ ಚರಿತ್ರವು ಶ್ರವಣ ಮಾಡಿದ ಮಾತ್ರದಿಂದ, ಕೂಡಲೇ ಚಿತ್ತಕ್ಕೆ ಶಾಂತಿ ಉಂಟಾಗುತ್ತದೆ. ಆದರೆ ಮುಮುಕ್ಷು ಜನರ ಸಲುವಾಗಿ ನಿರ್ಗುಣ ಲಕ್ಷಾರ್ಥವೂ ಹೇಳಲೇಬೇಕಾಗಿರುತ್ತದೆ. ಆದ್ದರಿಂದ ಸಜ್ಜನರಾದ ನೀವು ಈ ಕಥೆಯ ಲಕ್ಷಾರ್ಥದ ಕಡೆಗೆ  ಲಕ್ಷ್ಯ ಕೊಡಬೇಕು. ಅಂತಾ ಈ ಲಕ್ಷ್ಯಾರ್ಥವನ್ನು  ಶ್ರವಣ ಮಾಡುವುದರಿಂದ ಚಿತ್ತವು ಮಲರಹಿತವಾಗಿ ಅಂತರದಲ್ಲಿ ಜ್ಞಾನಜ್ಯೋತಿಯು ಪ್ರಗಟವಾಗುವದು. :"ತೀವ್ರ ವೈರಾಗ್ಯ ಮತ್ತು ವಿಮಲ ಶಾಂತಿ ಎಂಬುವೇ  ಆ ದಂಪತಿಗಳು. ಇವರು ಸಿದ್ಧ ಸದ್ಗುರುವಿನ ಆಜ್ಞೆಯಿಂದ ಭವಾರಣ್ಯದೊಳಗೆ

ಹೋಗುತ್ತಾರೆ. ಅವರು ಅಲ್ಲಿ ಸುಖದಿಂದ ಸಂಚರಿಸುತ್ತಿರುವಾಗ ಕ್ರೋಧವೆಂಬ ವ್ಯಾಘ್ರವು ಅಕಸ್ಮಾತ್ತಾಗಿ ಎದ್ದು, ಆ ಶಾಂತಿಯನ್ನು ನುಂಗಲಿಕ್ಕೆ ನೋಡುವಾಗ, ಶಾಂತಿಯು ಸದ್ಗುರುನಾಥನ ಸ್ಮರಣೆಯನ್ನು ಮಾಡುವಂಥವಳಾದಳು. ಸದ್ಗುರುರು ಹೃದಯದಲ್ಲಿ ಪ್ರಕಟನಾದನು. ಮತ್ತು ಅದೇ ಕ್ಷಣದಲ್ಲಿ ಕ್ರೋಧವು ಶಾಂತವಾಯಿತು. ಈ ಪ್ರಕಾರ ಸದ್ಗುರುವು ಅವರನ್ನು ರಕ್ಷಿಸಿ, ಮುಂದೆ ಆತ್ಮ ಸುಖದ ಕಡೆಗೆ ಕಳುಹಿಸುವಂಥವನಾದನು, ಆತ್ಮಾನುಭವ ಒಮ್ಮೆ ಆದ ಮೇಲೆ ಭವಾರಣ್ಯದಲ್ಲಿ ಸಂಚರಿಸಿದರೂ, ಕ್ರೋಧ ಬಂತೆಂದರೆ ಅದು ಶಾಂತ ರೂಪದಿಂದ ಇದ್ದು ತನ್ನ ಸಂಗಾತಿಯಿಂದ ಪರಮಾರ್ಥಕ್ಕೆ ಬರುವ ವಿಘ್ನಗಳನ್ನು ಪರಮಾರ್ಥಕ್ಕೆ ಬರುವ ವಿಘ್ನಗಳನ್ನು ನಿವಾರಿಸಿಕೊಟ್ಟು, ಕಡೆಗೆ ಬಿಟ್ಟು ಹೋಗುತ್ತದೆ ":. ದೇವಾಧಿದೇವನಾದ ಆ ಸದ್ಗುರುನಾಥನ ಹೃದಯದಲ್ಲಿ ಎಲ್ಲಾ ಬ್ರಹ್ಮಾಂಡಗಳೂ ಇರುವವು.ಆತನು ಈಶ್ವರನಿಗೆ ನಿಯಂತನೂ, ತ್ರಿಮೂರ್ತಿಗಳಿಗೆ ಸತ್ತಾಮಾತ್ರದಿಂದ ಆಡಿಸುವಂಥವನೂ, ಆಗಿರುತ್ತಾನೆ. ಎಲ್ಲಾ ಪ್ರಾಣಿಗಳನ್ನು

ಈಶ್ವರನು ಬಂಧನದಲ್ಲಿ ಹಾಕುತ್ತಾನೆ. ಆದರೆ ದಯಾರ್ಣವನಾದ ಸದ್ಗುರುವು ಈ ಲೋಕದಲ್ಲಿ ಬಂದು, ತನಗೆ ಶರಣು ಬಂದವರೆಲ್ಲರನ್ನು ಒಮ್ಮಿಂದೊಮ್ಮೆ ಮುಕ್ತರನ್ನಾಗಿ ಮಾಡುತ್ತಾನೆ. ಆ ಸದ್ಗುರುವಿನ ಕೀರ್ತಿ ವರ್ಣಿಸಲಿಕ್ಕೆ ಸಾವಿರ ಹೆಡೆಗಳುಳ್ಳ ಶೇಷನಿಗೆ ಜಿಹ್ವೆಗಳು ಸಾಲುವುದಿಲ್ಲ. ಅಂಥಾದ್ದರೊಳಗೆ ಮಂದಮತಿಯಾದ ನಾನು ಎಷ್ಟು ವರ್ಣಿಸಲಿ.ಹೇ ಶ್ರೋತ ಜನರುಗಳಿರಾ, ಮುಂದಿನ ಅಧ್ಯಾಯದಲ್ಲಿ ಅದ್ಭುತವಾದ ಕಥನವನ್ನು ಸಾವಧಾನ ಚಿತ್ತದಿಂದ ಕೇಳುವಂಥವರಾಗಿರಿ. ಅದರ ಶ್ರವಣ ಮಾತ್ರದಿಂದ ಸಂಸಾರ ಮೋಹವು ಹಾರಿಹೋಗಿ, ಹೃದಯದಲ್ಲಿ ನಿರ್ಮಲ ಜ್ಞಾನವು ಪ್ರಕಟವಾಗುವದು. ಎಂಬಲ್ಲಿಗೆ ಶ್ರೀ ಸಿದ್ಧಾರೂಢ ಕಥಾಮೃತದೊಳ ಶ್ರವಣಮಾತ್ರದಿಂದ ಸರ್ವ ಪಾಪಗಳನ್ನು ಭಸ್ಮ ಮಾಡುವಂಥ, ಬಹು ಮಧುರವಾದ ಈ ಹದಿನಾಲ್ಕನೇ ಅಧ್ಯಾಯವನ್ನು ಶಿವದಾಸನು ಶ್ರೀ ಸದ್ಗುರು ಸಿದ್ಧಾರೂಢರ ಚರಣಾರವಿಂದಗಳಲ್ಲಿ ಅರ್ಪಿಸಿರುವನು.